**ಕನ್ನಡ ಸಂಭ್ರಮ**



## ಫೇಸ್‌ಬುಕ್ ಪೋಸ್ಟ್ ಎಂಬ ಹೊಸ ಸಾಹಿತ್ಯ ಪ್ರಕಾರ

ಫೇಸ್‌ಬುಕ್ ಪೋಸ್ಟ್ ಎಂಬುದೇ ಹೊಸ ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳುತ್ತಿದೆ ಎಂಬುದನ್ನು ಒಪ್ಪಿಕೊಳ್ಳಬೇಕು. ಅದು ಎಷ್ಟು ಪರಿಣಾಮಕಾರಿ ಎಂಬುದು ಬೇರೆ ವಿಚಾರ. ಟ್ವಿಟರ್‌ನಲ್ಲಿ ಅಕ್ಷರಗಳ ಬಳಕೆಗೆ ಮಿತಿಯಿದೆ. ಫೇಸ್‌ಬುಕ್‌ನಲ್ಲಿಯೂ ಹೆಚ್ಚು ಉದ್ದವಾಗಿ ಬರೆದರೆ ಯಾರೂ ಓದುವುದಿಲ್ಲ. ಈಗಿನ ತಲೆಮಾರಿನವರು ಆ ನಾಲ್ಕು ಸಾಲುಗಳಿಂದಲೇ ತೃಪ್ತರಾಗುತ್ತಿದ್ದಾರೆ. ಸಾಹಿತ್ಯದ ಗಂಭೀರ ಓದಿನ ಮೇಲೆ ಇದು ಖಂಡಿತ ಪರಿಣಾಮ ಬೀರುತ್ತದೆ. ಆದರೆ ಅದಕ್ಕೆ ಏನೂ ಮಾಡಲಾಗುವುದಿಲ್ಲ. ಆನ್‌ಲೈನ್‌ನಲ್ಲಿ ಅಕ್ಷರಗಳನ್ನು ಓದುವವರ ಸಂಖ್ಯೆ ಕಡಿಮೆಯೇ ಆಗುತ್ತಿದೆ. ಆರು ನೂರು ಪದಗಳಿಗಿಂತ ಹೆಚ್ಚು ಉದ್ದದ ಲೇಖನಗಳು ಓದಿಸಿಕೊಳ್ಳುತ್ತಿಲ್ಲ.

ಯೂಟ್ಯೂಬ್‌ನಲ್ಲಿ ನಮ್ಮ ಚಾನೆಲ್ ಇದೆ. ಅದರಲ್ಲಿ ವಿಡಿಯೊ ಹಾಕಿದರೂ ಒಂದು ಸಾವಿರ ವ್ಯೂವ್ ದಾಟುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಎಂದರೆ, ಬೆಳಿಗ್ಗೆ ಇಂಟರ್‌ನೆಟ್ ಆನ್ ಮಾಡಿದ ತಕ್ಷಣ ಜನರಿಗೆ ಸಾಕಷ್ಟು ಕಂಟೆಂಟ್ ಬಂದು ಬೀಳುತ್ತಿವೆ; ಅದರಲ್ಲಿ ಕಸವೇ ಹೆಚ್ಚು. ಹೀಗಾಗಿ ಯಾವುದನ್ನು ಓದಬೇಕು, ಯಾವುದನ್ನು ಓದುವ ಅಗತ್ಯ ಇಲ್ಲ ಎಂಬುದನ್ನು ನಿರ್ಧಾರ ಮಾಡುವ ಗೊಂದಲದಿಂದಾಗಿ ಸುಮ್ಮನೇ ಎಲ್ಲದರ ಮೇಲೂ ಕಣ್ಣಾಡಿಸಿ ಮುಂದಕ್ಕೆ ಸಾಗುತ್ತಾರಷ್ಟೇ. ಎಷ್ಟೋ ಬಾರಿ ಬರಹವನ್ನು ಪೂರ್ತಿಯಾಗಿ ಓದದೆಯೇ, ಅದರ ಬಗ್ಗೆ ನಿರ್ಧಾರಕ್ಕೆ ಬಂದುಬಿಡುತ್ತಾರೆ. 2 ಸಾವಿರ ಪದಗಳ ಒಂದು ಲೇಖನ ಪ್ರಕಟಿಸಿದರೆ ಅದನ್ನು ಹೆಚ್ಚು ಜನ ಓದುವುದಿಲ್ಲ. ಅದೇ ಲೇಖನವನ್ನು ಯಾರಿಂದಲಾದರೂ ಓದಿಸಿ ವಿಡಿಯೊ ಮಾಡಿ ಹಾಕಿದರೆ ಅದು ಹೆಚ್ಚು ಜನರನ್ನು ತಲುಪುತ್ತದೆ. ಅಕ್ಷರಕ್ಕಿಂತ ದೃಶ್ಯ ಮಾಧ್ಯಮವನ್ನು ಜನರು ಇಷ್ಟಪಡುತ್ತಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ. ಹೀಗಾಗಿ ಆನ್‌ಲೈನ್‌ನಿಂದ ಕನ್ನಡದ ಓದಿನಲ್ಲಿ ಹೆಚ್ಚೇನೂ ಬದಲಾವಣೆ ಉಂಟಾಗುವುದಿಲ್ಲ.

**–ಕಿರಣ್,**

'ಋತುಮಾನ' ವೆಬ್‌ಪತ್ರಿಕೆಯ ಸಂಪಾದಕ

### ನುಡಿಋತುವಿನ ಸಮ್ಮಾನ




ಕನ್ನಡದಲ್ಲಿ ಸಾಹಿತ್ಯ ಪತ್ರಿಕೆಗಳ ಜಮಾನ ಮುಗಿದಂತೆ ತೋರುತ್ತಿರುವ ಸಂದರ್ಭದಲ್ಲಿ, ಸಾಹಿತ್ಯ ಪತ್ರಿಕೆ ಮಾಡಬಹುದಾದ, ಮಾಡಬೇಕಾದ ಕೆಲಸಗಳನ್ನು ಉತ್ಸಾಹದಿಂದ ಮಾಡುತ್ತಿರುವ ವೆಬ್‌ತಾಣ ಋತುಮಾನ (ruthumana.com). ಕಿರಣ್, ಕುಂಟಾಡಿ ನಿತೇಶ್ ಮತ್ತು ಅವಿನಾಶ್ ಎಂಬ ಮೂವರು ಉತ್ಸಾಹಿ ತರುಣರು ನಡೆಸುತ್ತಿರುವ ಈ ಅಂತರ್ಜಾಲ ಪತ್ರಿಕೆಯಲ್ಲಿ ಸಿನಿಮಾ, ಸಾಹಿತ್ಯ, ಚಿಂತನೆ ಹೀಗೆ ಹಲವು ವಿಷಯಗಳ ಕುರಿತು ತುಂಬ ಗಂಭೀರವಾದ ವಿಚಾರಗಳ ಕುರಿತ ಸಂವಾದಗಳು ನಡೆಯುತ್ತಿರುತ್ತವೆ. ಪ್ರಚೋದನಕಾರಿಯಲ್ಲದ, ಚಿಂತನಶೀಲ, ಗಂಭೀರ ವಿಷಯಗಳಿಗೆ ಆನ್‌ಲೈನ್‌ನಲ್ಲಿ ಬೇಡಿಕೆ ಇಲ್ಲ ಎಂಬ ಜನಪ್ರಿಯ ಅಭಿಪ್ರಾಯದ ನದಿಯಲ್ಲಿ, ಪ್ರವಾಹದ ವಿರುದ್ಧವಾಗಿ ಈಜುತ್ತಿರುವ ಈ ಪತ್ರಿಕೆ, ಎಲ್ಲ ನವಮಾಧ್ಯಮಗಳನ್ನು (ವಿಡಿಯೊ, ಆಡಿಯೊ, ಚಿತ್ರ, ಅಕ್ಷರ) ಬಳಸಿಕೊಂಡು ನುಡಿನೇಯ್ಗೆಯ ಕೆಲಸ ಮಾಡುತ್ತಿದೆ. ಅಭಿರುಚಿ ರೂಪಿಸುವ ಪ್ರಯತ್ನ ಮಾಡುತ್ತಿದೆ. ಜೊತೆಯಲ್ಲಿ ಪುಸ್ತಕ ಮಾರಾಟದ ಪ್ರಕ್ರಿಯೆಯನ್ನೂ ಒಳಗೊಂಡಿದೆ.

'ಆರಂಭದಲ್ಲಿ ನಮ್ಮ ಫೋಕಸ್ ಪಕ್ಕಾ ಫಿಕ್ಷನ್ ಸಾಹಿತ್ಯದ ಮೇಲಿತ್ತು. ಆದರೆ ಜನರಿಗೆ ನಾನ್‌ಫಿಕ್ಷನ್ ಮೇಲೆ ಆಸಕ್ತಿ ಹೆಚ್ಚು ಎಂಬುದು ಅರ್ಥವಾಯಿತು. ಒಂದು ಕಥೆಗೆ ಬರುವ ವ್ಯೂವ್‌ಗಳಿಗಿಂತ ರಾಜಕೀಯ ಲೇಖನಕ್ಕೆ ಬರುವ ಹಿಟ್‌ಗಳ ಸಂಖ್ಯೆ ಹೆಚ್ಚು' ಎಂದು ಋತುಮಾನ ತನ್ನ ಹೂರಣದ ಮಾನದಂಡಗಳನ್ನು ವಿಸ್ತರಿಸಿಕೊಂಡ ಕುರಿತು ಹೇಳುತ್ತಾರೆ ಸಂಪಾದಕರಲ್ಲಿ ಒಬ್ಬರಾದ ಕಿರಣ್.

'ಆನ್‌ಲೈನ್‌ನಲ್ಲಿ ಕನ್ನಡ ಎಂಬುದು ಕನ್ನಡದ ಓದುಗನಿಗೆ ಪ್ರಾತಿನಿಧಿಕ ಆಯ್ಕೆ ಆಗಿರಬಹುದಷ್ಟೆ. ಋತುಮಾನದಲ್ಲಿ ಬರುವ ಯಾವುದೋ ಒಂದು ಲೇಖನದಿಂದ ಒಂದಿಷ್ಟು ಜನರಿಗಾದರೂ ಯಾವುದೋ ವಿಷಯದ ಮೇಲೆ ಆಸಕ್ತಿ, ಅಭಿರುಚಿ ಹುಟ್ಟುವ ಸಾಧ್ಯತೆ ಇರುತ್ತದೆ. ಹೀಗಾಗಿಯೇ ನಾವು ಓದುಗರ ಸಂಖ್ಯೆ ಕಡಿಮೆ ಇದ್ದರೂ ನಿಲ್ಲಿಸದೆ ನಡೆಸಿಕೊಂಡು ಬರುತ್ತಿದ್ದೇವೆ' ಎಂದು ಕಿರಣ್ ತಮ್ಮ ಉದ್ದೇಶವನ್ನು ಹೇಳುತ್ತಾರೆ. ಯಾವತ್ತಿಗೂ ಶುದ್ಧ ಸಾಹಿತ್ಯ ಪತ್ರಿಕೆಗಳಿಗೆ ಓದುಗರ ಸಂಖ್ಯೆ ಮಿತವಾಗಿಯೇ ಇರುತ್ತದಲ್ಲವೇ?

ಇಂದಿನ ಆನ್‌ಲೈನ್ ಸಾಹಿತ್ಯ ಪತ್ರಿಕೆಗಳ ಎದುರಿನ ದೊಡ್ಡ ಸವಾಲುಗಳೆಂದರೆ ಸಾಮಾಜಿಕ ಮಾಧ್ಯಮಗಳು. ಮನಸ್ಸಿಗೆ ತೋಚಿದ್ದನ್ನು ತೋಚಿದಾಕ್ಷಣ ಫೇಸ್‌ಬುಕ್ ಗೋಡೆಯಲ್ಲಿ ಗೀಚುವ ಅವಕಾಶವಿರುವ ಈ ಕಾಲದಲ್ಲಿ 'ಸ್ಟೇಟಸ್'ಗಳ ಹಂಗುಮೀರಿ ಗಂಭೀರ ಬರಹಗಳನ್ನು ಪ್ರಕಟಿಸುವುದು ಸವಾಲೇ ಸರಿ. ಈ ಸವಾಲನ್ನು ಋತುಮಾನ ಅಷ್ಟೇ ಸಮರ್ಥವಾಗಿ ಎದುರಿಸುತ್ತಿದೆ.

ಮುಖ್ಯವಾಹಿನಿಯಿಂದ ಹೊರಗಿರುವ ಲೇಖಕರು, ಬೇರೆ ಬೇರೆ ಕ್ಷೇತ್ರಗಳ ಬಗೆಗಿನ ಪರಿಣತರ ಸಂದರ್ಶನವನ್ನು ಋತುಮಾನ ಮಾಡುತ್ತಿದೆ. ಅವರ ಬಳಿ ಈಗ 250–300 ಗಂಟೆಗಳ ಕಂಟೆಂಟ್ ಇದೆ. 'ಆಡಿಯೊ, ವಿಡಿಯೊ ಆದರೂ ಹದಿನೈದು ನಿಮಿಷಕ್ಕಿಂತ ಹೆಚ್ಚು ಅವಧಿಯ ತುಣುಕನ್ನು ಒಂದೇ ಬಾರಿ ನೋಡಿ ಮುಗಿಸುವುದಿಲ್ಲ. ಆದರೆ ಇವೆಲ್ಲ ಈ ಕ್ಷಣಕ್ಕೇ ಜನರನ್ನು ತಲುಪಬೇಕು ಎಂಬ ಹಂಬಲಕ್ಕಿಂತ ಹೆಚ್ಚಾಗಿ, ದಾಖಲೀಕರಣ ಆಗಿ ಉಳಿದುಕೊಂಡರೆ ಮುಂದೊಂದು ದಿನ ಉಪಯೋಗಕ್ಕೆ ಬರಬಹುದು ಎಂಬ ನಂಬಿಕೆ ಋತುಮಾನದ್ದು' ಎನ್ನುತ್ತಾರೆ ಕಿರಣ್. ಹೀಗೆ ಸಾಂಸ್ಕೃತಿಕ ಕಲಾಪ್ರಕಾರಗಳ ದಾಖಲೀಕರಣ ಮಾಡುತ್ತಿರುವ 'ಸಂಚಿ ಫೌಂಡೇಷನ್' ಅನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಜಾಲತಾಣದ ಸಂಪಾದಕೀಯ ಬಳಗವೇ ತಮ್ಮ ಆದಾಯದ ಸ್ವಲ್ಪ ಭಾಗವನ್ನು ವೆಬ್‌ಸೈಟ್ ಚಟುವಟಿಕೆಗಳಿಗಾಗಿ ಮೀಸಲಿಟ್ಟಿದ್ದಾರೆ. ಋತುಮಾನ ಟ್ರಸ್ಟ್‌ಗೆ ಓದುಗರು ಆರ್ಥಿಕ ನೆರವನ್ನು ನೀಡಲೂ ಅವಕಾಶವಿದೆ. 'ನೂರು ರೂಪಾಯಿ ಖರ್ಚಾದರೆ ಇಪ್ಪತ್ತು ರೂಪಾಯಿಯನ್ನು ಕೈಯಿಂದ ಹಾಕುವ ಸ್ಥಿತಿ ಇದೆ. ಇದರ ಕುರಿತು ನಮಗೆ ಮಹತ್ವಾಕಾಂಕ್ಷೆಯೇನೂ ಇಲ್ಲ. ಎಲ್ಲಿಯವರೆಗೆ ಜನರಿಂದ ಸ್ಪಂದನೆ ಸಿಗುತ್ತದೆಯೋ, ಅಲ್ಲಿಯವರೆಗೂ ನಡೆಸಿಕೊಂಡು ಹೋಗುತ್ತೇವೆ' ಎನ್ನುತ್ತಾರೆ ಕಿರಣ್.

ಇನ್ನೊಂದು ತಿಂಗಳಲ್ಲಿ

